ಉಳಿಕೆ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ಸೂಕ್ತ ನಿರ್ಧಾರದ ನಂತರ ಅತೀ ಜರೂರಾಗಿ ಪ್ರಾರಂಭಿಸಲಾಗುವುದು.

೧) ಈ ಯೋಜನೆಯ ಅಂದಾಜು ಮೊತ್ತ ರೂ. 6600 ಲಕ್ಷ ರೂ.ಗಳು (1991-92ನೇ ದರಗಳ ಪ್ರಕಾರ) ಮಾರ್ಚ 1995ರವರೆಗೆ. ರೂ. 881 ಲಕ್ಷ ವೆಚ್ಚವಾಗಿದೆ. 1995-96ನೇ ಸಾಲಿನಲ್ಲಿ ರೂ. 200 ಲಕ್ಷ ಅನುದಾನ ಒದಗಿಸಲಾಗಿದ್ದು ರೂ. 267.45 ಲಕ್ಷ ವೆಚ್ಚವಾಗಿದೆ.

ಶ್ರೀ ರೇವೂ ನಾಯಕ್ ಬೆಳಮಗಿ : ಸನ್ಮಾನ್ಯ ಅಧ್ಯಕ್ಷರೇ, ನಮಗೆ ಉತ್ತರವನ್ನು ನೀಡಿದ್ದಾರೆ. ಅದರಲ್ಲಿ ಸೂಕ್ತ ನಿರ್ದಾರದ ನಂತರ ಅತೀ ಜರೂರಾಗಿ ಪ್ರಾರಂಭಿಸಲಾಗುವುದೆಂದು ಹೇಳಿದ್ದಾರೆ. ಯಾವಾಗ ಸೂಕ್ತ ನಿರ್ಧಾರವಾಗುತ್ತದೆಂಬುದು ನಮಗೆ ಸ್ವಲ್ಪ ಸಂಶಯ ಬರುತ್ತಿದೆ. ಕಮಲಾಪೂರ ಕ್ಷೇತ್ರ ಬಹಳ ಹಿಂದುಳಿದಿರುವಂತಹ ಕ್ಷೇತ್ರವಾಗಿದೆ. ಅಲ್ಲಿ ಎರಡು ವರ್ಷಗಳಿಂದ ಗಂಡೋರಿ ನಾಲಾ ಯೋಜನೆ ನಿಂತಿದೆ. ಅದರ ಕೆಲಸ ಇನ್ನೂ ಚಾಲೂವಾಗಿಲ್ಲ. ಜನರು ನನ್ನನ್ನು ಕೇಳುತ್ತಿದ್ದಾರೆ. ನೀವು ಶಾಸಕರಾದಿರಿ, ನೀವು ಶಾಸಕರಾದ ನಂತರ ಕೆಲಸ ಬಂದ್ ಆಯಿತು. ನೀವು ಏಕೆ ಇದನ್ನು ಕೇಳುತ್ತಿಲ್ಲ. ನೀವು ಕೇಳದೆ ಹೋದರೆ ನಮ್ಮ ಜೊತೆಗೆ ಬನ್ನಿ, ಉಪವಾಸ ಸತ್ಯಾಗ್ರಹ ಮಾಡೋಣ, ಎಂದು ಕೇಳುತ್ತಿದ್ದಾರೆ. ತಾವು ನಿರ್ದಿಷ್ಟವಾಗಿ ಯಾವಾಗ ಕೆಲಸ ಪ್ರಾರಂಭ ಮಾಡುತ್ತಿರೆಂದು ಹೇಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲೇ ಕೊಟ್ಟಿದೆ, ಅವರು ದಯಮಾಡಿ ಅದನ್ನು ಓದಿಕೊಳ್ಳಬೇಕು.

ಅಧ್ಯಕ್ಷರು : ಅವರ ಸಮಸ್ಯೆ ಏನೆಂದರೆ ಅವರು ಈ ಸಲ ಆರಿಸಿಬಂದಂಥ ಕ್ಷೇತ್ರ ಮೀಸಲು ಕ್ಷೇತ್ರ. ಅಲ್ಲಿ ಯಾವ ರೀತಿಯಾಗಿ ಕೋ-ಇನ್ಸಿರೆಂಟ್ ಆಗಿದೆ ಎಂದರೆ ಅವರು ಆರಿಸಿ ಬಂದ ಮೇಲೆ ಅಲ್ಲಿ ಕೆಲಸನಿಂತು ಹೋಗಿದೆ ಎಂದು ಅದಕ್ಕೆ ಅವರು ವರಿ ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಒಂದೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.1995-96ನೇ ಸಾಲಿನಲ್ಲಿ200ಲಕ್ಷ ರೂಪಾಯಿಗಳನ್ನು ಅನುದಾನ ಒದಗಿಸಲಾಗಿದ್ದು 267.45ಲಕ್ಷ ರೂಪಾಯಿಗಳು ವೆಚ್ಚ ಮಾಡಿದ್ದೇವೆ; ಅವರು ಕೇಳಿದಂತಹ ಕನ್‌ಸ್ಟ್ರಕ್ಷನ್ಸ್ ಕಾರ್ಪೋರೇಷನ್‌ಗೆ ಕೊಟ್ಟಿದಂತಹ ವರ್ಕ್ ಬಗ್ಗೆ ಏನು ಸ್ಥಗಿತವಾಗಿದೆಯೋ ಅದನ್ನು ಪುನಃ ಅವರು ರೆಡ್ಯೂಸ್ ರೇಟಿಗೆ ನಾವೆ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ನಾವು ಹೈ ಪವರ್ ಕಮಿಟಿ ಎಂದು ಮಾಡಿದ್ದೇವೆ. ಈಗ ಅವರ ಮುಂದೆ ಬಂದ ಮೇಲೆ ನಾವು ಅವರಿಗೆ ಕಡಿಮೆ ದರದಲ್ಲಿ ಈ ಕೆಲಸವನ್ನು ಕೊಟ್ಟು ಮಾಡಿಸಲು ನಿರ್ಧಾರ ಮಾಡಿದ್ದೇವೆ. ಈಗ ಯಾವುದೇ ಅಡೆತಡೆಗಳು ಇಲ್ಲದೆ ಕೆಲಸ ಮುಂದುವರೆಯುತ್ತದೆ.

ಬೆಂಗಳೂರು ನಗರದಲ್ಲಿ ಸಂಚಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದು.

483 - ಶ್ರೀ ಬಿ.ಟಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ವಿವಿಧ ವಾಸದ ಬಡಾವಣೆಗಳಲ್ಲಿ ಸಾರ್ವಜನಿಕ ರಸ್ತೆಗಳಲ್ಲಿ ರಾತ್ರಿ ವೇಳೆಯಲ್ಲಿ ನಿಲ್ಲಿಸಲಾಗುತ್ತಿರುವ ಲಾರಿ ಮತ್ತು ಬಸ್ಸುಗಳ ಸಂಖ್ಯೆ ಎಷ್ಟು? (ಪಟ್ಟಿ ನೀಡುವುದು)

ಆ) ಇವರುಗಳ ವಿರುದ್ಧ ಸರ್ಕಾರ ಕೈಕೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹಮಂತ್ರಿಗಳು) :

ಅ) ನಿಲುಗಡೆಯಾಗುವ ವಾಹನಗಳ ಸಂಖ್ಯೆಯನ್ನು ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಆ) ಎಲ್ಲೆಲ್ಲಿ ಲಾರಿ ಮತ್ತು ಬಸ್ಸು ಚಾಲಕರು ಸಂಚಾರಿ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿರುವುದು ಕಂಡುಬಂದಲ್ಲಿ ಅವರ ವಿರುದ್ಧ ಸಂಚಾರಿ ಪೋಲೀಸರು ನಿಯಮಾನುಸಾರ ಕ್ರಮ ಜರುಗಿಸುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಪ್ರಶ್ನೆ ಬೆಂಗಳೂರು ನಗರದ ವಿವಿಧ ವಾಸದ ಬಡಾವಣೆಗಳಲ್ಲಿ ಅದರಲ್ಲೂ ಸಾರ್ವಜನಿಕ ರಸ್ತೆಗಳಲ್ಲಿ ರಾತ್ರಿ ವೇಳೆಯಲ್ಲಿ ಲಾರಿ, ಬಸ್ಸುಗಳು ಹಾಗೂ ಮೆಟಾಡಾರ್‌ಗಳು ನಿಂತು ಅದೊಂದು ರೀತಿ ವರ್ಕಶಾಪ್ ಆಗಿ ಪರಿವರ್ತನೆಯಾಗಿ ಓಡಾಡುವುದಕ್ಕೂ ಆಗುವುದಿಲ್ಲ, ತೊಂದರೆಯಾಗುತ್ತಿದೆ, ರಾತ್ರಿ ವೇಳೆಯಲ್ಲಿ ಆಗಬಾರದಂಥ ತೊಂದರೆಗಳೆಲ್ಲಾ ಆಗುತ್ತಿದೆ ಎನ್ನುವುದರ ಬಗ್ಗೆ ನಾನು ಗಮನ ಸೆಳೆದಿದ್ದೆ. ಆ ರೀತಿ ಉಲ್ಲಂಘನೆ ಮಾಡುತ್ತಿರುವುದು ಕಂಡುಬಂದಲ್ಲಿ ಅವರ ವಿರುದ್ಧ ಸಂಚಾರಿ ಪೋಲೀಸಿನವರು ನಿಯಮಾನುಸಾರ ಕ್ರಮ ಜರುಗಿಸುತ್ತಿದ್ದಾರೆ ಎನ್ನುವ ಮಾತನ್ನು ನೀವು ಹೇಳಿದ್ದೀರಿ. ಈ ರೀತಿಯಾದ್ದು ಯಾವುದಾದರೂ ನಿಮ್ಮ ಗಮನಕ್ಕೆ ಬಂದಿಲ್ಲವೇ? ಆಕಸ್ಮಾತ್ ಬಂದಿದ್ದರೆ, ಎಷ್ಟು ಕೇಸಗಳನ್ನು ತೆಗೆದುಕೊಂಡಿದ್ದೀರಿ? ಏನು ಮಾಡಿದ್ದೀರಿ? ಎನ್ನುವುದರ ಬಗ್ಗೆ ದಯಮಾಡಿ ಹೇಳಬೇಕು ಮತ್ತು ಇದರಿಂದ ಆಗುತ್ತಿರತಕ್ಕಂಥ ತೊಂದರೆ ನಾನು ಹೇಳುವುದಕ್ಕೆ ಆಗದೆ ಇರುವ ಮಟ್ಟಿಗೆ ಇದೆ. ಅವ್ಯವಹಾರಗಳು ಅನೈತಿಕ ವ್ಯವಹಾರಗಳು ನಡೆಯುತ್ತಿರುವುದು, ಪೋಲಿಸರಿಂದ ಕಿರುಕುಳವಾಗುತ್ತಿರುವುದು, ಇದು ಸಾಕಷ್ಟು ಜಾಸ್ತಿಯಾಗಿರತಕ್ಕಂಥ ಹಿನ್ನೆಲೆಯಲ್ಲಿ ಇದನ್ನು ಶಾಶ್ವತವಾಗಿ ಬಗೆಹರಿಸುವುದಕ್ಕೆ ಒಂದು ಯೋಜನೆಯನ್ನು ಏನಾದರೂ ಮಾಡಿದ್ದೀರೋ? ಅದರ ಬಗ್ಗೆ ಚಿಂತನೆಯನ್ನು ಮಾಡಿದ್ದೀರೋ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ರಸ್ತೆಗಳಲ್ಲಿ ರಾತ್ರಿ ವೇಳೆಯಲ್ಲಿ ವಾಹನಗಳನ್ನು ಈ ರೀತಿ ಮಾನ್ಯ ಸದಸ್ಯರು ಹೇಳಿದಂತೆ, ನಿಲ್ಲಿಸುತ್ತಿರುವುದು ಅದು ಗಮನಕ್ಕೆ ಬಂದಿರುವುದು ನಿಜ. ಸುಮಾರು ಇಪ್ಪತ್ತೆಂಟು ಸಾವಿರ ಲಾರಿಗಳು ಬೆಂಗಳೂರಿನಲ್ಲಿ ನೋಂದಣಿಯಾಗಿದೆ,ಬಸ್ಸುಗಳು ಸಾವಿರಾರು ನೋಂದಣಿಯಾಗಿವೆ ಮತ್ತು ಫ್ಲೋಟಿಂಗೂ ಬಹಳ ಇರುತ್ತವೆ. ಹೊರರಾಜ್ಯದಿಂದ ಬರತಕ್ಕಂಥವು, ದೂರ ಜಿಲ್ಲೆಗಳಿಂದ ಬರತಕ್ಕಂಥವು ಇವೆಲ್ಲಾ ಸೇರಿ ಸುಮಾರು ನಲವತ್ತೆಂಟರಿಂದ ಐವತ್ತು ಸಾವಿರ ವಾಹನಗಳಾಗುತ್ತವೆ. ಕೆಲವು ವಾಹನಗಳನ್ನೆಲ್ಲಾ ರಾತ್ರಿ ಹೊತ್ತು

ಪಾರ್ಕಿಂಗ್ ಮಾಡುತ್ತಾರೆ. ಪಾರ್ಕ್ ಮಾಡುವುದಕ್ಕೆ ಅವರಿಗೆ ಬೇರೆ ಬದಲಿ ಜಾಗವನ್ನು ತೋರಿಸಬೇಕು. ಈಗ ಬೆಂಗಳೂರಿನ ಸುತ್ತಮುತ್ತ ಏನು ಬಡಾವಣೆಗಳು ಬೆಳೆಯುತ್ತಿವೆ, ಅಲ್ಲಿ ಕೆಲವು ಜಾಗಗಳನ್ನು ಗುರುತಿಸುವುದಕ್ಕೆ ಸ್ವತಃ ಮುಖ್ಯಮಂತ್ರಿಗಳೇ ನಗರಪ್ರದಕ್ಷಣೆ ಮಾಡಿ ಕೆಲವು ಜಾಗಗಳನ್ನು ಗುರುತಿಸಿದ್ದಾರೆ. ಬೆಂಗಳೂರು ಸಿಟಿಯೊಳಗೆ ಸಹ ಪ್ರೈವೇಟ್ ಬಸ್‌ಗಳನ್ನು ಪಾರ್ಕ ಮಾಡುವುದಕ್ಕೆ ಕೆಲವು ಜಾಗಗಳನ್ನು ಗುರುತಿಸಿದ್ದಾರೆ. ಆ ಜಾಗಗಳನ್ನು ಅವರಿಗೆ ಒದಗಿಸಿದ ಮೇಲೆ, ಅವು ಕೆಲವು ಕಾರ್ಪೋರೇಷನ್ ಆಸ್ತಿಗಳಾಗಿವೆ, ಬಿ.ಡಿ.ಎ. ಆಸ್ತಿಗಳಿದ್ದಾವೆ, ಖಾಸಗಿಯವರ ಆಸ್ತಿ ಇದೆ. ಅವರಿಗೆ ನಾವು ಪಾರ್ಕಿಂಗ್ ಪ್ಲೇಸ್ ಅನ್ನು ಆಲ್ಟರ್ ನೇಟಿವ್ ಆಗಿ ಕೊಟ್ಟ ಮೇಲೆ, ನೀವು ಸಿಟಿಯೊಳಗೆ ವಾಹನಗಳನ್ನು ಪಾರ್ಕ ಮಾಡಬೇಡಿ ಎಂದು ಹೇಳಬಹುದು. ಮನೆಗಳನ್ನು ಕಟ್ಟುತ್ತಾರೆ,ಅದಕ್ಕೆ ಮೆಟಿರೀಯಲ್ಸಗಳನ್ನೆಲ್ಲಾ ತೆಗೆದುಕೊಂಡು ಹೋಗಬೇಕು, ಅದನ್ನು ಅವನು ರಾತ್ರಿ ಹೊತ್ತಿನಲ್ಲೇ ತೆಗೆದುಕೊಂಡು ಹೋಗಬೇಕು, ನೀವು ತೆಗೆದುಕೊಂಡೇ ಹೋಗಬೇಡಿ ಎಂದು ಹೇಳಿದರೆ ಹೇಗಾಗುತ್ತದೆ? ಮತ್ತು ಇದರ ಮೇಲೆ ಉದ್ಯೋಗವನ್ನು ಅವಲಂಬಿಸಿಕೊಂಡಿರತಕ್ಕಂಥ ಲಕ್ಷಾಂತರ ನಿರುದ್ಯೋಗಿ ಜನಗಳು ಸಹ ಉದ್ಯೋಗವನ್ನು ಮಾಡಿಕೊಂಡಿದ್ದಾರೆ. ಹೀಗಾಗಿ ಬ್ಲಾಂಕೆಟ್ ಪ್ಲಾನ್ ಎಂದು ಒಂದೇ ಸಾರಿ ಮಾರತಕ್ಕಂಥದ್ದು ಕಷ್ಟವಾಗುತ್ತದೆ. ಎಲ್ಲಿ ಟ್ರಾಫಿಕ್ ರೂಲ್ಸ ಅನ್ನು ಉಲ್ಲಂಘನೆ ಮಾಡಿ ಪಾರ್ಕ ಮಾಡಿದ್ದಾರೆ, ತಾವು ಅನೈತಿಕ ವ್ಯವಹಾರಗಳು ನಡೆಯುತ್ತವೆಂದು ಏನು ಹೇಳಿದ್ದೀರಿ ಅದು ಏನು ವ್ಯವಹಾರವೆಂದು ನಿರ್ದಿಷ್ಟವಾಗಿ ಹೇಳಿದರೆ ನಾನು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ವಾಹನಗಳನ್ನು ಪಾರ್ಕ ಮಾಡಲು ಆಲ್ಟರನೇಟಿವ್ ಜಾಗ ಹುಡುಕುತ್ತೇವೆಂದು ಹೇಳುತ್ತಿದ್ದೀರಿ, ಇದನ್ನು ಮಾಡಲು ಎಷ್ಟು ವರ್ಷ ಬೇಕು? ಅದರ ಬಗ್ಗೆ ಏನು ಚಿಂತನೆ ಮಾಡಿದ್ದೀರೆಂದು ಹೇಳಿ. ನೀವು ಮುಖ್ಯಮಂತ್ರಿಗಳನ್ನು ಹೊರಗಡೆಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದಿದ್ದು, ಆ ಟ್ರಕ್ ಟರ್ಮಿನಲ್ ಅವೆಲ್ಲವನ್ನು ಸಹ ನಾವು ನೋಡಿದ್ದೇವೆ. ಆದರೆ ಅದು ಯಾವಾಗ ಜಾರಿಯಾಗತಕ್ಕಂಥದ್ದು? ಸಿಟಿಯೊಳಗೆ ಪಾರ್ಕ ಮಾಡತಕ್ಕ ವಾಹನಗಳಿಗೆ ಯಾವ ರೀತಿ ಆಲ್ಟರನೇಟಿವ್ ಜಾಗಗಳನ್ನು ಕೊಡುತ್ತೀರಿ, ಅದರ ಬಗ್ಗೆ ಏನು ಮಾಡಿದ್ದೀರಿ? ಮಾಡಬೇಕು ನಿಜ, ಅದಕ್ಕೆ ಅದನ್ನು ಯಾವಾಗ ಮಾಡುತ್ತೀರೆನ್ನುವುದು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸ್ವಾಮಿ, ಜಾಗ ಸಿಕ್ಕದಾಗಲೆಲ್ಲಾ ಮಾಡುತ್ತೇವೆ. ಬೇಕಾದಷ್ಟು ಕೋರ್ಟ ಕೇಸಸಗಳಿರುತ್ತೇವೆ. ಬೇರೆ ಬೇರೆ ಇನ್ಸಿಟ್ಯೂಷನ್‌ಗಳಿಗೆ ಜಾಗ ಸೇರಿರುತ್ತವೆ, ಅವನ್ನೆಲ್ಲಾ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮಾಡುತ್ತೇನೆ.

ಶ್ರೀ ಯು.ಬಿ ಬಣಕಾರ್ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಿಂದ ದಾವಣಗೆರೆಗೆ ಹೋಗುವಾಗ ದಿನ ರಾತ್ರಿ ಪೀಣ್ಯ ಟೆಲಿಫೋನ್ ದಾಸರಹಳ್ಳಿಯವರೆವಿಗೂ ನೂರಾರು ಲಾರಿಗಳು ನಿಂತಿರುತ್ತವೆ. ದಿನ ಒಂದು ತಾಸು ತಡವಾಗುವಂಥದ್ದು ಪ್ರತಿ ದಿವಸ ಆಗುತ್ತಿದೆ. ದಯವಿಟ್ಟು ಈ ಬಗ್ಗೆ ಕ್ರಮ ತೆಗೆದುಕೊಂಡು ಆ ಪೀಣ್ಯ ರಸ್ತೆಯಲ್ಲಿ ಯಾವುದೇ ವಾಹನ ನಿಲ್ಲದಂತೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೇ, ಇವರು ಹೇಳಿರತಕ್ಕಂಥ ವಿಚಾರದಲ್ಲಿ ವಾಸ್ತವಾಂಶವಿದೆ. ಆದಷ್ಟು ಟ್ರಾಫಿಕ್ ಕಂಜೆಶನ್ ಅನ್ನು ಕಡಿಮೆ ಮಾಡುವುದಕ್ಕೆ ಕ್ರಮವನ್ನು ತೆಗೆದಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ ಇಪ್ಪತ್ತೇಳನೆ ಫೆಬ್ರುವರಿ 1996ನೇ ಐದನೆ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ ಎಂಬತ್ತೆಂಟು ಪ್ರಶ್ನೆಗಳ ಪೈಕಿ ಎಂಬತ್ತು ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ತಮ್ಮ ಅಪ್ಪಣೆಯ ಮೇರೆಗೆ ಮಂಡಿಸಿರುತ್ತೇನೆ.

ಬಂದೀಖಾನೆಗಳಲ್ಲಿರುವ ಖೈದಿಗಳು ಹಾಗೂ ಸಿಬ್ಬಂದಿಗಳ ಸಂಖ್ಯೆ

102- ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಂಧೀಖಾನೆಗಳು ಹಾಗೂ ಅವುಗಳಲ್ಲಿರುವ ಕೈದಿಗಳ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಆ) ಒಂದು ದಿನಕ್ಕೆ ಒಬ್ಬ ಕೈದಿಯ ಉಟೋಪಚಾರ ಇತರೇ ಖರ್ಚುಗಳಿಗೆ ತಗಲುವ ವೆಚ್ಚವೆಷ್ಟು?

ಇ) ಪರಾರಿಯಾದ ಕೈದಿಗಳೆಷ್ಟು ಮತ್ತು ಮರಳಿ ಬಂಧಿಸಿದ ಕೈದಿಗಳ ಸಂಖ್ಯೆ ಎಷ್ಟು?

ಈ) ಪರಾರಿಯಾದ ಕೈದಿಗಳ ಪ್ರಕರಣಗಳಲ್ಲಿ ಯಾವುದಾದರೂ ಅಧಿಕಾರಿಗಳು ಭಾಗಿಯಾಗಿರುವುದೇ?

ಉ) ಹಾಗಿದ್ದಲ್ಲಿ ಅಂಥವರ ಮೇಲೆ ಏನು ಕ್ರಮ ಜರುಗಿಸಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ರಾಜ್ಯದಲ್ಲಿ 960 ಬಂಧೀಖಾನೆಗಳಿದ್ದು, ಇವುಗಳಲ್ಲಿ ಇಡಲಾದ ಕೈದಿಗಳು

ಪುರುಷರು	ಮಹಳೆಯರು	ಒಟ್ಟು
7645	184	7229

ಹಾಗೂ ಅಧಿಕಾರಿಗಳು ಸೇರಿ 1368 ಸಿಬ್ಬಂದಿ ವರ್ಗವಿರುತ್ತದೆ.

ಆ) ಒಂದು ದಿನಕ್ಕೆ ಒಬ್ಬ ಕೈದಿಗೆ ಸರಾಸರಿ ವೆಚ್ಚ ರೂ. 55.94

ಇ) 1991-95ರಲ್ಲಿ ಪರಾರಿಯಾದ

ವಿಚಾರಣಾಧೀನ ಬಂದಿಗಳು	28
ಸಜಾ ಕೈದಿಗಳು	5